# ವಸಾಹತುಶಾಹಿ ಕಾಲದಲ್ಲಿ ಬೆಂಗಳೂರು ಅಭಿವೃದ್ಧಿ: ಒಂದು ವಿಶ್ಲೇಷಣೆ

**ಬೋರೇಗೌಡ ಎಸ್.ಬಿ.**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ, ಬೆಂಗಳೂರು.

DOI: https://doi.org/10.5281/zenodo.17960022

## ABSTRACT:

ವಸಾಹತುಶಾಹಿ ಆಡಳಿತದ ಅವಧಿಯಲ್ಲಿ ಬೆಂಗಳೂರಿನ (Bengaluru) ಬೆಳವಣಿಗೆ ಮತ್ತು ಸಮಗ್ರ ಅಭಿವೃದ್ಧಿಯ ಕುರಿತು ಈ ಲೇಖನವು ವಿಶ್ಲೇಷಿಸುತ್ತದೆ. 1831 ರಲ್ಲಿ ಮೈಸೂರು ಸಂಸ್ಥಾನ ಬ್ರಿಟಿಷರ ನೇರ ಆಡಳಿತಕ್ಕೆ ಬಂದ ನಂತರ ಮತ್ತು 1834 ರಲ್ಲಿ ಮಾರ್ಕ್ ಕಬ್ಬನ್ ರಾಜಧಾನಿಯನ್ನು ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸಿದ ನಂತರ ನಗರವು ಪ್ರಮುಖ ಪ್ರಗತಿಯನ್ನು ಕಂಡಿತು.

ಬ್ರಿಟಿಷ್ ಪ್ರಭಾವದಿಂದಾಗಿ ಕಬ್ಬನ್ ಪಾರ್ಕ್, ಲಾಲ್‌ಬಾಗ್‌ನಂತಹ ಉದ್ಯಾನವನಗಳು, ರಾಜಭವನ, ಅಠಾರ ಕಛೇರಿಯಂತಹ ಸಾರ್ವಜನಿಕ ಕಟ್ಟಡಗಳು ನಿರ್ಮಾಣಗೊಂಡವು. ಇನ್‌ಫಂಟ್ರಿ ರಸ್ತೆ, ಕ್ವೀನ್ಸ್ ರಸ್ತೆಯಂತಹ ಹೊಸ ರಸ್ತೆಗಳ ನಿರ್ಮಾಣದೊಂದಿಗೆ ನಗರೀಕರಣ ಹೆಚ್ಚಾಯಿತು. ಈ ಅವಧಿಯಲ್ಲಿ ಪತ್ರಿಕೋದ್ಯಮ, ಬ್ಯಾಂಕಿಂಗ್, ಆರೋಗ್ಯ ಕ್ಷೇತ್ರ ಮತ್ತು ಮುಖ್ಯವಾಗಿ ಕೈಗಾರಿಕಾ ವಲಯದಲ್ಲಿ ಗಣನೀಯ ಪ್ರಗತಿಯಾಯಿತು. ಎಚ್‌ಎಎಲ್, ಸರ್ಕಾರಿ ಸಾಬೂನು ಕಾರ್ಖಾನೆ ಮತ್ತು ಮೈಸೂರು ಲ್ಯಾಂಪ್ಸ್‌ನಂತಹ ಪ್ರಮುಖ ಕೈಗಾರಿಕೆಗಳು ಸ್ಥಾಪನೆಯಾಗುವುದರ ಮೂಲಕ ವಸಾಹತುಶಾಹಿ ಕಾಲದಲ್ಲಿ ಬೆಂಗಳೂರು ಬೃಹತ್ ನಗರವಾಗಿ ರೂಪುಗೊಂಡಿತು.

## KEYWORDS:

ಬೆಂಗಳೂರು, ವಸಾಹತುಶಾಹಿ ಆಡಳಿತ, ಮಾರ್ಕ್ ಕಬ್ಬನ್, ನಗರಾಭಿವೃದ್ಧಿ, ಕೈಗಾರೀಕರಣ.

ಮೈಸೂರು ಸಂಸ್ಥಾನ ವಸಾಹತುಶಾಹಿಯ ಕೂಸು. ವಸಾಹತುಶಾಹಿಯಿಲ್ಲದೆ ಅದರ ಅಸ್ತಿತ್ವವನ್ನು ಊಹಿಸಿಕೊಳ್ಳುವುದು ಅಸಾಧ್ಯ. ಮೈಸೂರು ಸಂಸ್ಥಾನ 1799ರ ವೇಳೆಯಲ್ಲಿ ಕೆಲವು ರಾಜಕೀಯ ಒತ್ತಡದ ಹಿನ್ನೆಲೆಯಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ವಸಾಹತು ಕೇಂದ್ರವಾಯಿತು. ಇದರ ಪ್ರಕಾರ ಸಂಸ್ಥಾನದ ಸಮಸ್ತವೆಲ್ಲವೂ ಬ್ರಿಟಿಷರ ಅಧೀನಕ್ಕೆ ವಹಿಸಿಕೊಡಬೇಕಾಯಿತು. [1] ಮೈಸೂರು ಸಂಸ್ಥಾನದಲ್ಲಿ ಉಂಟಾದ ಒಂದು ಸಣ್ಣ ದಂಗೆಯನ್ನು ಕಾರಣವಾಗಿಸಿಕೊಂಡ ಕಂಪನಿ ಮೈಸೂರು ಸಂಸ್ಥಾನವನ್ನು 1831ರಲ್ಲಿ ನೇರವಾದ ಆಡಳಿತಕ್ಕೆ ಒಳಪಡಿಸಿಕೊಂಡು ಸಂಸ್ಥಾನ ಕಮಿಷನರ್‌ಗಳ ಆಳ್ವಿಕೆಗೆ 1881ರವರೆಗೆ ಒಳಪಟ್ಟಿತು. ಈ ಆಡಳಿತದ ಸುಮಾರು 50 ವರ್ಷಗಳ ಕಾಲದಲ್ಲಿ ಸಂಸ್ಥಾನ ನೇರ ವಸಾಹತುಶಾಹಿ ಆಡಳಿತಕ್ಕೆ ಒಳಪಡಬೇಕಾಯಿತು.

### ಬೆಂಗಳೂರಿನ ಹಿನ್ನೆಲೆ:

ಬೆಂಗಳೂರು ಪ್ರಾಚೀನ ಕಾಲದಿಂದಲೂ ಒಂದು ಪ್ರಮುಖ ನಗರವಾಗಿ ಹಂತ ಹಂತವಾಗಿ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಕಂಡಿತು. ಕರ್ನಾಟಕದ ರಾಜಧಾನಿಯಾಗಿರುವ ಬೆಂಗಳೂರು ಜಿಲ್ಲಾ ಕೇಂದ್ರಗಳಲ್ಲಿ ಒಂದಾಗಿದೆ. ಕಡಿಮೆ ವಿಸ್ತೀರ್ಣತೆ ಮತ್ತು ಅತಿ ಹೆಚ್ಚು ಜನಸಂಖ್ಯೆಯಿರುವ ಜಿಲ್ಲೆಯಾಗಿದೆ. ಈ ನಗರವನ್ನು "ಮಿಲೇನಿಯಂ

ಸಿಟಿ, ಸಿಲಿಕಾನ್ ಸಿಟಿ, ಬಯೋಟೆಕ್ ಸಿಟಿ, ಉದ್ಯಾನನಗರಿ" ಎಂದು ಕರೆಯಲಾಗಿರುವ ಬೆಂಗಳೂರಿನ ನಿರ್ಮಾತೃ ಮಾಗಡಿ ಕೆಂಪೇಗೌಡನೆಂದು ಬೇಗೂರಿನ ಶಾಸನ ಉಲ್ಲೇಖಿಸುತ್ತದೆ.[2] ಇದನ್ನು ಮೊದಲು ಬೆಂದಕಾಳೂರು ಎಂದು ಕರೆಯುತ್ತಿದ್ದರು ಎಂಬ ಉಲ್ಲೇಖವೂ ಇದೆ. ಅಲ್ಲದೇ ಮಡಿವಾಳದ ಸೋಮೇಶ್ವರ ದೇವಾಲಯದ ಶಾಸನದಲ್ಲಿ ಇದನ್ನು 'ವೆಂಗಳೂರು' ಎಂದು ಉಲ್ಲೇಖಿಸಲಾಗಿದೆ. ಇಂತಹ ಬೆಂಗಳೂರು, ಮೈಸೂರು ಸಂಸ್ಥಾನದಲ್ಲಿ ಮೊದಲ ಮುಖ್ಯ ಕಮಿಷನರ್‌ರಾದ ಮಾರ್ಕ್ ಕಬ್ಬನ್ ಸಂಸ್ಥಾನದ ರಾಜಧಾನಿಯನ್ನು ಮೈಸೂರಿನಿಂದ ಬೆಂಗಳೂರಿಗೆ 1834ರಲ್ಲಿ ವರ್ಗಾಯಿಸಿದನು. ತರುವಾಯ ಬೆಂಗಳೂರು ವಸಾಹತುಶಾಹಿಯ ಆಳ್ವಿಕೆಯ ಕಾಲದಲ್ಲಿ ಹೆಚ್ಚಿನ ಪ್ರಗತಿ ಮತ್ತು ಅಭಿವೃದ್ಧಿಯನ್ನು ಕಂಡಿತು.

**ಬೆಂಗಳೂರಿನ ಅಭಿವೃದ್ಧಿ ಮತ್ತು ಬೆಳವಣಿಗೆ:**

ಲಾರ್ಡ್ ಕಾರ್ನ್‌ವಾಲೀಸ್ 1791ರಲ್ಲಿ ಟಿಪ್ಪುಸುಲ್ತಾನನನ್ನು ಸೋಲಿಸಿ ಬೆಂಗಳೂರು ನಗರವನ್ನು ವಶಪಡಿಸಿಕೊಂಡ ನಂತರ ಪ್ರಮುಖ ನಗರವಾಗಿ ಬೆಳವಣಿಗೆಯನ್ನು ಕಂಡಿತು. ಇದರಿಂದ ಇದು ಸುಂದರವಾದ ವಸತಿಗೃಹಗಳು, ಹೊಸ ಹೊಸ ನಗರಗಳು ನಿರ್ಮಾಣವಾದವು. ಈ ಹಿನ್ನೆಲೆಯಲ್ಲಿ ರಿಚ್‌ಮಂಡ್ ಟೌನ್, ಕ್ಲೀವ್‌ಲ್ಯಾಂಡ್ ಟೌನ್, ರೆಸಿಡೆನ್ಸಿ ಟೌನ್ ಮೊದಲಾದವು. ವಸಾಹತುಶಾಹಿಯ ಆಡಳಿತದ ಪ್ರಭಾವದಿಂದ ಬೆಂಗಳೂರಿನಲ್ಲಿ ಇನ್‌ಫಂಟ್ರಿ ರಸ್ತೆ, ಕಬ್ಬನ್ ಪಾರ್ಕ್, ಪೆರೇಡ್ ಗ್ರೌಂಡ್, ಕ್ವೀನ್ಸ್ ರಸ್ತೆ, ಪ್ಯಾಲೇಸ್ ರಸ್ತೆ, ಪೋರ್ಟ್ ರಸ್ತೆ, ಗ್ರ್ಯಾಂಟ್ ರಸ್ತೆ, ಲಾವೆಲ್ ಬ್ರಿಗೇಡ್, ಮ್ಯಾಗ್ರಥ್ ರಸ್ತೆ, ಪ್ರಿಮ್ ರೋಚ್ ರಸ್ತೆ, ವಿಕ್ಟೋರಿಯಾ ರಸ್ತೆ, ಡಿಕನ್ಸನ್ ರಸ್ತೆ, ಸೆಂಟ್‌ಜಾನ್ ರಸ್ತೆ, ರೇಸ್‌ಕೋರ್ಸ್ ರಸ್ತೆ, ಲೇಡಿ ಕರ್ಜನ್ ರಸ್ತೆ, ಮೊದಲಾದ ರಸ್ತೆಗಳು ನಿರ್ಮಾಣಗೊಂಡವು. ಇವುಗಳಲ್ಲದೆ ಕಬ್ಬನ್ ಪಾರ್ಕ್, ಲಾಲ್‌ಬಾಗ್, ತಿಗಳೂರು, ಬೈಕಾರ್ಡ್ ಗಾರ್ಡನ್, ರೆಸಿಡೆನ್ಸಿ ಪಾರ್ಕ್ ಗಳು ನಿರ್ಮಾಣಗೊಂಡವು.

ಬ್ರಿಟಿಷರ ಆಡಳಿತದ ಪ್ರಭಾವದ ಹಿನ್ನೆಲೆಯಲ್ಲಿ ಅನೇಕ ಸಾರ್ವಜನಿಕ ಕಟ್ಟಡಗಳು ನಿರ್ಮಾಣಗೊಳ್ಳುವುದರ ಮೂಲಕ ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ಸುಂದರವಾಗಿ ಕಾಣಲು ಪ್ರಾರಂಭಿಸಿದವು. ವಸಾಹತುಶಾಹಿ ಆಡಳಿತದಲ್ಲಿ ಸಂಸ್ಥಾನದ ಮುಖ್ಯ ಇಂಜಿನಿಯರಾಗಿದ್ದ ಮೇಜರ್ ಜನರಲ್ ರಿಚಾರ್ಡ್ ಸ್ಯಾಂಕಿ ಕಬ್ಬನ್ ಪಾರ್ಕ್‌ನ ನೀಲ ನಕ್ಷೆಯನ್ನು ತಯಾರಿಸಿದರು. ಇದೇ ಇಂದಿನ ಕಬ್ಬನ್ ಪಾರ್ಕ್. ಈಗಿನ ಹೆಸರು ಶ್ರೀ ಚಾಮರಾಜೇಂದ್ರ ಪಾರ್ಕ್. ಈ ಉದ್ಯಾನವನದಲ್ಲಿ 1935–36ರ ಸಮಯದಲ್ಲಿ ಕಾರಂಜಿಯನ್ನು ನೇಪಾಳದ ರಾಣಿ ನಿರ್ಮಿಸಿದರು.[3]

ಇಂದಿನ ರಾಜಭವನವನ್ನು ಮಾರ್ಕ್ ಕಬ್ಬನ್ 1842ರಲ್ಲಿ 'ಎ ಮ್ಯಾನ್ಷನ್ ಕಟ್ಟಡ' ಎಂಬ ಹೆಸರಿನಲ್ಲಿ ನಿರ್ಮಿಸಿದರು. ಮುಂದೆ 1962ರಲ್ಲಿ ಇದಕ್ಕೆ ರಾಜಭವನ ಎಂದು ನಾಮಕರಣ ಮಾಡಲಾಯಿತು. ಬೆಂಗಳೂರು ನಗರದಲ್ಲಿ ಕಬ್ಬನ್ ಪಾರ್ಕ್ ಪಕ್ಕದಲ್ಲಿರುವ ಮುಖ್ಯ ಅಂಚೆ ಕಚೇರಿಯನ್ನು 1854ರಲ್ಲಿ ನಿರ್ಮಿಸಲಾಯಿತು. ಅದೇ ರೀತಿ ನಗರದಲ್ಲಿ ಪ್ರಾಚ್ಯವಸ್ತು ಮ್ಯೂಸಿಯಂ ಅನ್ನು 1865ರಲ್ಲಿ ನಿರ್ಮಿಸಲಾಯಿತು. ಬ್ರಿಟಿಷ್ ಸರ್ಕಾರದ ವೈಸ್‌ರಾಯ್ ಲಾರ್ಡ್ ಕರ್ಜನ್ ಅಂದಿನ ಮೈಸೂರಿನ ದಿವಾನರಾಗಿದ್ದ ಕೆ. ಶೇಷಾದ್ರಿ ಅಯ್ಯರ್‌ರ ನೆನಪಿಗಾಗಿ ಶೇಷಾದ್ರಿ ಅಯ್ಯರ್ ಮೆಮೋರಿಯಲ್ ಕಟ್ಟಡವನ್ನು ನಿರ್ಮಿಸಿದರು. ರಾಜಕುಮಾರ ಅಲ್ಬರ್ಟ್ ವಿಕ್ಟರ್ ವೇಲ್ಸ್ 1889ರಲ್ಲಿ ಇಂದಿನ ಗಾಜಿನ ಅರಮನೆಯನ್ನು ನಿರ್ಮಿಸಿದರು. ಇದು ಕ್ರಿಸ್ಟಲ್ ಅರಮನೆಯ ಮಾದರಿಯಲ್ಲಿದೆ. ಲಾಲ್‌ಬಾಗ್‌ನಲ್ಲಿರುವ ಗ್ರಂಥಾಲಯವನ್ನು ವಿಲಿಯಂ ನ್ಯೂ ರವರು 1863–73ರ ಅವಧಿಯಲ್ಲಿ ನಿರ್ಮಿಸಿದರು. ಇದು ಏಷ್ಯಾದ ಅತಿ ಹಳೆಯ

ಗ್ರಂಥಾಲಯವಾಗಿದೆ. ಭಾರತದ ಗೌರ್‌ನರ್ ಜನರಲ್ ಆಗಿದ್ದ ಲಾರ್ಡ್ ಮೇಯೋರವರ ಜ್ಞಾಪಕಾರ್ಥವಾಗಿ 1872ರಲ್ಲಿ ಮೆಯೋಹಾಲ್ ಕಟ್ಟಡವನ್ನು ನಿರ್ಮಿಸಲಾಯಿತು. ಇದು ಮಹಾನಗರಪಾಲಿಕೆಯ ಕಚೇರಿಯಾಗಿದ್ದು ಈಗ ಮಾಗಡಿ ಕೆಂಪೇಗೌಡರ ಜ್ಞಾಪಕಾರ್ಥವಾಗಿ ವಸ್ತುಸಂಗ್ರಹಾಲಯವಾಗಿ ಮಾರ್ಪಟ್ಟಿದೆ.

ಸಂಸ್ಥಾನದಲ್ಲಿ ವಿಜ್ಞಾನಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ಹಿನ್ನೆಲೆಯಲ್ಲಿ ಬೆಂಗಳೂರು ನಗರದಲ್ಲಿ ವಿಜ್ಞಾನವನ್ನು ಅಭಿವೃದ್ಧಿ ಪಡಿಸಲು 1898–1913ರಲ್ಲಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಅನ್ನು ಸ್ಥಾಪಿಸಲಾಯಿತು. ಇದು ವಿಜ್ಞಾನದ ಅಭಿವೃದ್ಧಿಗೆ ಸಹಕರಿಸಿದ ಸಂಸ್ಥೆಯಾಗಿದೆ. ಇಂದಿನ ಸಿ. ಒ. ಡಿ ಕಚೇರಿಯಾಗಿರುವ ಕರ್ನಲ್ ಕಟ್ಟಡವನ್ನು ಅಂದಿನ ಬ್ರಿಟಿಷ್ ಅಧಿಕಾರಿಯಾಗಿರುವ ಕರ್ನಲ್ ಲೆಟ್ 1880ರಲ್ಲಿ ನಿರ್ಮಿಸಿದನು. ಇದರಲ್ಲಿ ಮೈಸೂರಿನ ದಿವಾನ್ ಆಗಿದ್ದ ಸರ್. ಎಂ. ಮಿರ್ಜಾ ಇಸ್ಮಾಯಿಲ್ ವಾಸವಾಗಿದ್ದರು. ಸಂಸ್ಥಾನದಲ್ಲಿ ಸಾಹಿತ್ಯ ಮತ್ತು ವಿಜ್ಞಾನದ ಅಭಿವೃದ್ಧಿಗೆ ನೆರವಾಗಲು ಎಲ್. ಬಿ. ಬೌರಿಂಗ್ ಕಮಿಷನರ್‌ರಾಗಿದ್ದ ಸಂದರ್ಭದಲ್ಲಿ ಬೌರಿಂಗ್ ಇನ್‌ಸ್ಟಿಟ್ಯೂಟ್ ಸಂಸ್ಥೆಯನ್ನು 1888ರಲ್ಲಿ ನಿರ್ಮಿಸಿದರು. ಹ್ಯೂಡೇಲಿ ಮೆಮೋರಿಯಲ್ ಹಾಲ್‌ನ್ನು ಮಿಥಿಕ್ ಸೊಸೈಟಿಯು 1917ರಲ್ಲಿ ಡೇಲಿಯ ಜ್ಞಾಪಕಾರ್ಥವಾಗಿ ನಿರ್ಮಿಸಿತು.

ಕಲಾಸಿಪಾಳ್ಯದಲ್ಲಿ 1724ರಲ್ಲಿ ನಿರ್ಮಿತಗೊಂಡ ಚರ್ಚ್ ಬೆಂಗಳೂರಿನ ಮೊದಲ ಚರ್ಚ್ ಎಂದು ಪರಿಗಣಿಸಲಾಗಿದೆ. ಇದು ಈಗ ಇಲ್ಲದಾಗಿದೆ. ನಂತರದು ಉತ್ತರಹಳ್ಳಿ ಅನ್ನಮ್ಮ ಬೆಟ್ಟದ ಬುಡದಲ್ಲಿರುವ ಮತ್ತು ಹಲಸೂರಿನ ಕೆರೆ ಕೋಡಿ ಬಳಿಯ ಚರ್ಚ್‌ಗಳಾಗಿವೆ. ಬೆಂಗಳೂರಿನ ಬೇಗೂರಿನಲ್ಲಿ 1847ರಲ್ಲಿ ಚರ್ಚ್ ಒಂದನ್ನು ನಿರ್ಮಿಸಲಾಯಿತು. 1803ರಲ್ಲಿ ನಿರ್ಮಿಸಿರುವ ಶಿವಾಜಿನಗರದ ಚರ್ಚ್, ಸೇಕ್ರೆಡ್ ಹಾರ್ಟ್ ಚರ್ಚ್, 1899ರಲ್ಲಿ ನಿರ್ಮಾಣಗೊಂಡ ಮರಿಯಾಪುರ ಚರ್ಚ್, ಚಿಕ್ಕಬಾಣಾವರದ ಪಕ್ಕದಲ್ಲಿರುವ ಶಿಲ್ವೆಪುರ ಚರ್ಚ್, ಸಂತ ಪ್ಯಾಟ್ರಿಕರ ಚರ್ಚ್, ಸಂತ ಮಾರ್ಕ್‌ನ ಕೆಥೆಡ್ರಲ್, ಸಂತ ಅಂಡ್ರೊಸ್ ಚರ್ಚ್, ಸಂತ ಮೇರಿ ಕೆಥೆಡ್ರಲ್ ಚರ್ಚ್, ಲೂರ್ದು ಮಾತೆಯ ಚರ್ಚ್ ಮೊದಲಾದ ಚರ್ಚ್‌ಗಳು ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿರ್ಮಾಣಗೊಳ್ಳುವುದರ ಮೂಲಕ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಸಂಸ್ಥಾನದಲ್ಲಿ ಕ್ರೈಸ್ತ ಧರ್ಮ ಪ್ರಭಾವ ಮತ್ತು ಪ್ರಖ್ಯಾತಿ ಪಡೆಯಿತು.

ವಸಾಹತುಶಾಹಿ ಆಡಳಿತದ ಅವಧಿಯಲ್ಲಿ ಬೆಂಗಳೂರಿನ ಕಂಟೋನ್ಮೆಂಟ್ ಪ್ರದೇಶವು ಬ್ರಿಟಿಷರ ಸೈನ್ಯದ ಮುಖ್ಯ ಕೇಂದ್ರವಾಯಿತು. ಇಲ್ಲಿ ಸರ್ಕಾರ 1864ರಲ್ಲಿ ಒಂದು ಭವ್ಯ ಆಸ್ಪತ್ರೆಯನ್ನು ನಿರ್ಮಿಸಿತು. ಇದು 1900ರ ವೇಳೆಯಲ್ಲಿ ಲೇಡಿ ಕರ್ಜನ್ ಆಸ್ಪತ್ರೆ ಎಂದು ಪುನರ್‌ನಾಮಕರಣಗೊಂಡಿತು. [4] ಬೆಂಗಳೂರು ನಗರ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಬೃಹತ್ ನಗರವಾಗಿ ಬೆಳೆಯುತ್ತಿದ್ದ ಕಾರಣ ಜನಸಂಖ್ಯೆ ಮಿತಿ ಮೀರಿ ಬೆಳೆಯುತ್ತಿತ್ತು. ಈ ಜನಸಂಖ್ಯೆಯ ಸಾಮರ್ಥ್ಯಕ್ಕೆ ನೀರಿನ ಪೂರೈಕೆಗಾಗಿ 1890ರಲ್ಲಿ ಹೆಸರುಘಟ್ಟ ಕೆರೆಯನ್ನು ನಿರ್ಮಿಸಲಾಯಿತು. ಇದರಿಂದ ಬೆಂಗಳೂರು ಮತ್ತು ದಂಡು ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿತ್ತು. ಹೆಸರುಘಟ್ಟದ ಕೆರೆಯಿಂದ ಬೆಂಗಳೂರು ನಗರಕ್ಕೆ ನೀರು ಪೂರೈಕೆ ಮಾಡಲು ಸಾಧ್ಯವಾಗದ ಸಂದರ್ಭದಲ್ಲಿ 1922ರಲ್ಲಿ ಸರ್. ಎಂ. ವಿಶ್ವೇಶ್ವರಯ್ಯರ ಅಧ್ಯಕ್ಷತೆಯಲ್ಲಿ ತಿಪ್ಪೆಗೊಂಡನಹಳ್ಳಿ ಜಲಾಶಯವನ್ನು ನಿರ್ಮಿಸಲಾಯಿತು. [5] ಮೈಸೂರು ಸರ್ಕಾರದ ಇಂಜಿನಿಯರ್ ಮೇಜರ್ ಸ್ಯಾಂಕಿಯವರು 1897ರಲ್ಲಿ ರೂ 5. 24 ಲಕ್ಷದಲ್ಲಿ ಸ್ಯಾಂಕಿ ಕೆರೆಯನ್ನು ನಿರ್ಮಿಸಿದರು. ಇದರ ಮೂಲಕವೂ ನಗರಕ್ಕೆ ನೀರನ್ನು ಪೂರೈಸಲಾಗುತ್ತಿತ್ತು. ಮಾರ್ಕ್ ಕಬ್ಬನ್ ರಾಜಧಾನಿಯನ್ನು ಬೆಂಗಳೂರಿಗೆ

ವರ್ಗಾಯಿಸಿದ ನಂತರ ಇಂದಿನ ಕರ್ನಾಟಕದ ಉಚ್ಚನ್ಯಾಯಾಲಯದ ಕಟ್ಟಡವಾಗಿರುವ ಅಠಾರ ಕಛೇರಿಯನ್ನು ನಿರ್ಮಿಸಿದನು. ಇದು ಅಂದಿನ ಆಡಳಿತದ ಕೇಂದ್ರ ಕಚೇರಿಯಾಗಿತ್ತು. ಇದರಲ್ಲಿ 18 ಇಲಾಖೆಗಳು ಕಾರ್ಯನಿರ್ವಹಿಸುತ್ತಿದ್ದವು. ಈ ಕಟ್ಟಡದ ಉಸ್ತುವಾರಿಯನ್ನು ನಾರಾಯಣಸ್ವಾಮಿ ಮೊದಲಿಯಾರ್ ಮತ್ತು ಸ್ಯಾಂಕಿ ಇದರ ಇಂಜಿನಿಯರ್‌ರಾಗಿದ್ದರು.

ಮೈಸೂರು ಸಂಸ್ಥಾನವು ವಸಾಹತುಶಾಹಿಗಳ ಆಳ್ವಿಕೆಯ ಕಾಲದಲ್ಲಿ ಪತ್ರಿಕೆಗಳು ಸಹಾ ಅಭಿವೃದ್ಧಿಯನ್ನು ಕಂಡಿತು. ಇವು ಜನಸಾಮಾನ್ಯರಿಗೆ ಸುದ್ದಿಯನ್ನು ತಿಳಿಸುವುದರ ಮೂಲಕ ಅವರಲ್ಲಿ ಜ್ಞಾನದ ಅರಿವನ್ನು ಉಂಟುಮಾಡಿ ಜಾಗೃತಿಯ ಪ್ರಜ್ಞೆಯನ್ನು ಮೂಡಿಸಿದವು. ಸಂಸ್ಥಾನದ ಮೊದಲ ವರ್ತಮಾನ ಪತ್ರಿಕೆ ದಿ ಬೆಂಗಳೂರು ಹೆರಾಲ್ಡ್ ಎಂದು ತಿಳಿಯಲಾಗಿದೆ. ಇದನ್ನು ಆರ್. ಎಚ್. ಜೇಮ್ಸ್ ಎಂಬುವರು ಇದರ ಸಂಪಾದಕರು. ಇದು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಪ್ರಕಟವಾಗುತ್ತಿತ್ತು. ಅದೇ ರೀತಿ ವೃತ್ತಾಂತ ಬೋಧಿನಿ, ಕರ್ನಾಟಕ ಪ್ರಕಾಶಿಕ, ದಿ ನ್ಯಾಸ್ ರೆಕಾರ್ಡ್, ಬೆಂಗಳೂರು ಸ್ಟೆಕ್ಟೇಟರ್ ಎಂಬ ಇಂಗ್ಲಿಷ್ ಪತ್ರಿಕೆ, ಬೆಂಗಳೂರ್ ಫೋರ್ಟ್‌ನೈಟ್ಲಿ ಪೋಲಿಸ್ ನ್ಯೂಸ್ ಪತ್ರಿಕೆ 1886–87ರಿಂದ ವಿ. ಬಿ. ಸುಬ್ಬಯ್ಯರವರಿಂದ ಪ್ರಕಟವಾಗುತ್ತಿತ್ತು. ನರಸಿಂಗರಾವ್‌ರಿಂದ 1894–95ರಲ್ಲಿ ಆರಂಭವಾದ ಸುರ್ಯೋದಯ ಪತ್ರಿಕೆ ಸಂಸ್ಥಾನದ ಮೊದಲ ದಿನಪತ್ರಿಕೆ. ಇವುಗಳಲ್ಲದೆ ಬೆಂಜಮಿನ್ ರೈಸ್‌ನಿಂದ 1862ರಲ್ಲಿ ಹಾರ್ವೆಸ್ಟ್ ಫೀಲ್ಡ್ ಇಂಗ್ಲಿಷ್ ಮಾಸ ಪತ್ರಿಕೆ ಮತ್ತು ಅರುಣೋದಯ ಪತ್ರಿಕೆಗಳು, ಮಹೊಮೆಡ್ ಷರೀಫ್‌ರಿಂದ 1872–73ರಲ್ಲಿ ತಾಲಿಸ್ಮ್ ಕರ್ತಾನ್ ಉರ್ದು ಪತ್ರಿಕೆ, ವಿ. ಎಸ್. ಸುಬ್ಬರಾವ್‌ರವರಿಂದ ಕರ್ನಾಟಕ ವಾಗ್ಭೀವನಿ, ಕರ್ನಾಟಕ ಪ್ರಕಾಶಿಕ, ವೃತ್ತಾಂತ ಚಿಂತಾಮಣಿ, ದೇಶಿಭಿಮಾನಿ ಪತ್ರಿಕೆ, ಮೈಸೂರ್ ಸ್ಟಾಂಡರ್ಡ್ ಮೊದಲಾದ ಪತ್ರಿಕೆಗಳು ಬೆಂಗಳೂರು ಭಾಗದಲ್ಲಿ ವಿಧವಿಧವಾದ ಮಾಹಿತಿಯನ್ನು ನೀಡುತ್ತಿದ್ದವು.

ವಸಾಹತುಶಾಹಿಯ ಆಳ್ವಿಕೆಯ ಕಾಲದಲ್ಲಿ ಬೆಂಗಳೂರು ಕೈಗಾರಿಕೆಯಲ್ಲೂ ಪ್ರಗತಿಯನ್ನು ಕಂಡಿತು. ಯುರೋಪಿಯನ್ನರ ಸಹಾಯದಿಂದ ಬೆಂಗಳೂರಿನಲ್ಲಿ ಸ್ಟೀಲ್ ಐರನ್ ಫೌಂಡ್ರಿಯನ್ನು ಸ್ಥಾಪಿಸಿ ಕಬ್ಬಿಣದ ಕುಲುಮೆಯನ್ನು ತಯಾರಿಸಲಾಗುತ್ತಿತ್ತು. ಬೆಂಗಳೂರು ಪ್ರಾಚೀನ ಕಾಲದಿಂದಲೂ ಎಣ್ಣೆ ಬೀಜಗಳಿಂದ ಎಣ್ಣೆ ತಯಾರಿಸುವ ಕೈಗಾರಿಕೆಯನ್ನು ಹೊಂದಿತ್ತು. ಇದು ಸಂಸ್ಥಾನದ ಮುಖ್ಯ ಕಸುಬುಗಳಲ್ಲಿ ಒಂದಾಗಿತ್ತು. ಇಂತಹ ಎಣ್ಣೆ ತಯಾರಿಕೆಯ ಕೈಗಾರಿಕೆಯು ಬೆಂಗಳೂರಿನಲ್ಲಿದ್ದು ಎತ್ತುಗಳ ಗಾಣದಿಂದ ಹುಚ್ಚೇಳ್ಳು, ಹುಲ್ಲೆಳ್ಳು, ಹರಳು ಕೊಬ್ಬರಿ, ಹಿಪ್ಪೆ ಮತ್ತು ಹೊಂಗೆ ಬೀಜಗಳ ಎಣ್ಣೆಯನ್ನು ತಯಾರಿಸುತ್ತಿದ್ದರು. ಇಲ್ಲಿ ಮದ್ಯವನ್ನು ಸಹ ತಯಾರಿಸುತ್ತಿದ್ದರು. ಬೆಂಗಳೂರಿನ ಜನಸಂಖ್ಯೆ ಹೆಚ್ಚಿದಂತೆ ಅದಕ್ಕೆ ತಕ್ಕಂತೆ ಮದ್ಯ ಭಟ್ಟಿ ಇಳಿಸುವ ಯಂತ್ರೋಪಕರಣಗಳನ್ನು ಬಳಸಲಾಯಿತು.

ಬೆಂಗಳೂರು ಪ್ರಾಚೀನ ಕಾಲದಿಂದಲೂ ಪ್ರಮುಖವಾದ ವಾಣಿಜ್ಯ ಮತ್ತು ವ್ಯಾಪಾರ ಹಾಗು ಕೈಗಾರಿಕೆಗಳ ತವರಾಗಿತ್ತು.[6] ಬೆಂಗಳೂರು ಪ್ರಾಚೀನ ಕಾಲದಲ್ಲೇ ರೋಮನ್ ಸಾಮ್ರಾಜ್ಯದ ಜೊತೆ ವ್ಯಾಪಾರ ಸಂಪರ್ಕ ಹೊಂದಿದ್ದರ ಬಗ್ಗೆ ಮತ್ತು ಬೆಂಗಳೂರಿನಲ್ಲಿ ರೋಮನ್ ಕಾಲದ ನಾಣ್ಯಗಳು ದೊರೆತಿರುವ ಬಗ್ಗೆ ಕುರುಹುಗಳು ಸಿಕ್ಕಿವೆ. ಗುಡಿ ಕೈಗಾರಿಕೆಗಳಲ್ಲಿ ಕರಕುಶಲ ಕಲೆ, ಕುಂಭ ಕಲೆ, ಚಾಪೆ ಮತ್ತು ಬುಟ್ಟಿ ಹೆಣೆಯುವುದು, ಎಣ್ಣೆ ತಯಾರಿಕೆ, ಮರಗೆಲಸ, ಚರ್ಮ ವಸ್ತುಗಳ ತಯಾರಿಕೆ, ಕಂಬಳಿ ತಯಾರಿಕೆ, ಗೊಂಬೆ ತಯಾರಿಕೆ, ಕಮ್ಮಾರ (ಕುಲುಮೆ), ಟೈಲ್ಸ್ ತಯಾರಿಕೆ, ತೆಂಗಿನ ನಾರು ಕೈಗಾರಿಕೆ, ರಾಟನ್ ಕೆಲಸ ಮತ್ತು ಹಿತ್ತಾಳೆ ಕೈಗಾರಿಕೆಗಳು ಮಿರ್ಜಾ ಇಸ್ಮಾಯಿಲ್‌ರ ಕಾಲದ ಹೆಚ್ಚು ಅಭಿವೃದ್ಧಿ ಸಾಧಿಸಿದವು.[7]

ಮೈಸೂರು ಸಂಸ್ಥಾನ ಹತ್ತಿ ಬಟ್ಟೆಯ ತಯಾರಿಕೆಗೆ ಪ್ರಸಿದ್ಧಿ ಪಡೆದಿದ್ದು ಬೆಂಗಳೂರು ಒಂದರಲ್ಲೇ ಶೇಕಡ 40ರಷ್ಟು ಕೈಮಗ್ಗಗಳಿದ್ದವೆಂದು ತಿಳಿಯಲಾಗಿದೆ. ಇಲ್ಲಿ ಸೀರೆ, ಕಿರಿಗೆ, ಕಣ ಎಂಬ ಬಟ್ಟೆಗಳನ್ನು ಚೌಕಳಿ ಬಟ್ಟೆ, ದುಪ್ಪಟಿ ಬಟ್ಟೆ, ಡೇರೆಯ ಬಟ್ಟೆಗಳನ್ನು ತಯಾರಿಸಲಾಗುತ್ತಿತ್ತು. ಬೆಂಗಳೂರಿನ ಜೊತೆಗೆ ದೊಡ್ಡಬಳ್ಳಾಪುರ, ಆನೇಕಲ್ಲು, ಕೋಲಾರ ಮೊದಲಾದವು ಪ್ರಮುಖ ವ್ಯಾಪಾರ ಕೇಂದ್ರಗಳು. ಬೆಂಗಳೂರಿನಲ್ಲಿ ತಯಾರುಗುತ್ತಿದ್ದ ರತ್ನ ಕಂಬಳಿ ಮತ್ತು ಜಮಖಾನಗಳು ಪ್ರಸಿದ್ಧವಾಗಿದ್ದವು. ಇಲ್ಲಿ ರತ್ನ ಕಂಬಳಿಯನ್ನು ತಯಾರಿಸುವ ಸುಮಾರು 100 ಮಗ್ಗಗಳು ಇದ್ದವೆಂದು ತಿಳಿಯಲಾಗಿದೆ. [8] ಇವುಗಳಲ್ಲಿ ಸರ್ದಾರ್, ನವಿಲು ಮತ್ತು ಅಷಮ್‌ಖಾನಿ ಮಾದರಿಗಳು ಪ್ರಸಿದ್ಧವಾಗಿದ್ದವು. [9] ಬೆಂಗಳೂರಿನ ನೇಕಾರರು ಬಹಳ ಕುಶಾಗ್ರಮತಿಗಳಾಗಿದ್ದು ಉತ್ತಮ ಬೆಲೆಯುಳ್ಳ ಸುಂದರವಾದ ವಿನ್ಯಾಸಗಳನ್ನು ಒಳಗೊಂಡ ವಿಭಿನ್ನ ಬಟ್ಟೆಗಳನ್ನು ತಯಾರಿಸುತ್ತಿದ್ದರು. ಬಾಂಬೆಯ ವಿಕ್ಟೋರಿಯಾ ಜುಬಿಲಿ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಮಾದರಿಯಂತೆ ಬೆಂಗಳೂರಿನಲ್ಲಿ ಜವಳಿ ಸಂಸ್ಥೆಯನ್ನು ಸ್ಥಾಪಿಸುವ ನಿರ್ಧಾರ ಕೈಗೊಳ್ಳಲಾಯಿತು. [10]

ಬೆಂಗಳೂರಿನಲ್ಲಿ 1884ರಲ್ಲಿ ಊಲನ್ ಕಾಟನ್ ಗಿರಣಿ, 1894ರಲ್ಲಿ ಮೈಸೂರು ಸ್ಪಿನ್ನಿಂಗ್ ಅಂಡ್ ಮ್ಯಾನ್ಯುಫ್ಯಾಕ್ಚರಿಂಗ್, 1897ರಲ್ಲಿ ಬೆಂಗಳೂರಿನಲ್ಲಿ ಕೇಂದ್ರ ಔದ್ಯಮಿಕ ಕಾರ್ಯಗಾರ, 1900ರಲ್ಲಿ ಎರಡು ಬಟ್ಟೆ ಗಿರಣಿಗಳು, 1908ರಲ್ಲಿ ದಿ ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿ. ಲಿ. ಸ್ಥಾಪನೆಯಾಯಿತು. ಸ್ಥಾಪನೆಯಾದವು. [11] ಬೆಂಗಳೂರಿನ ಸರ್ಕಾರಿ ಸಾಬೂನು ಕಾರ್ಖಾನೆ ಪ್ರಾರಂಭದಲ್ಲಿ ಕೇವಲ ಮೈ ಮತ್ತು ಬಟ್ಟೆ ತೊಳೆಯುವ ಸಾಬೂನು ತಯಾರಿಕೆಯ ಉದ್ದೇಶದಿಂದ 1918ರಲ್ಲಿ ಅತ್ಯಂತ ಸಾಧಾರಣ ಮಟ್ಟದಲ್ಲಿ ಪ್ರಾರಂಭವಾಯಿತು. ಆ ವರ್ಷದ ನವೆಂಬರ್‌ನಲ್ಲಿ "ಮೈಸೂರು ಟಾಯ್ಲೆಟ್ ಸೋಪನ್ನು" ಮಾರುಕಟ್ಟೆಗೆ ಪರಿಚಯಿಸಿ[12] ಮೈಸೂರು ಸರ್ಕಾರ ಬೆಂಗಳೂರಿನಲ್ಲಿ ಒಂದು ಶ್ರೀಗಂಧದ ಎಣ್ಣೆ ಕೈಗಾರಿಕೆಯನ್ನು 1916ರಲ್ಲಿ ಆರಂಭಿಸಿದ್ದು, [13] ಸರ್ಕಾರದ ಒಡೆತನದ ಕೇಂದ್ರ ಕೈಗಾರಿಕಾ ಯಂತ್ರ ಕಾರ್ಯಾಗಾರ 1897ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ಇದು ತೈಲ ಯಂತ್ರ, ಪೈಪ್ ಸೇರಿದಂತೆ ಸಂಸ್ಥಾನದ ನೀರು ಸರಬರಾಜು ಮತ್ತು ಲೋಕೋಪಯೋಗಿ ಇಲಾಖೆಗಳಿಗೆ ವಸ್ತುಗಳನ್ನು ಉತ್ಪಾದನೆ ಮಾಡುತ್ತಿತ್ತು. ತರುವಾಯ ಲೇತ್, ಗಿರಣಿ ಯಂತ್ರ, ಪವರ್ ಹ್ಯಾಮರ್, ಎಲೆಕ್ಟ್ರಿಕ್ ಟ್ಯಾಂಪರಿಂಗ್ ಫರ್ನೇಸ್ ಮತ್ತು ವೆಲ್ಡಿಂಗ್ ಪ್ಲಾಂಟ್ ಹಾಗು ಸ್ಪ್ರೇ ಪೇಂಟಿಂಗ್‌ಗಳನ್ನು, ಇವುಗಳ ಜೊತೆಗೆ ಫೈಲರ್, ಟೈಲ್ ತಯಾರಿಸುವ ಉಪಕರಣ, ಎಲೆಕ್ಟ್ರೋಲೈಸರ್‌ಗಳು, ಎಡ್ಜ್ ರನ್ನರ್‌ಗಳು ಮತ್ತು ಇತರ ರಸಾಯನಿಕ ಸ್ಥಾವರ, ಹಬೆಯ ಯಂತ್ರ, ಜವಳಿ ಉದ್ಯಮಕ್ಕೆ ಬೇಕಾಗುವ ಉತ್ಪನ್ನಗಳು, ಪೈಪ್‌ಗಳು, ಕೃಷಿಗೆ ಬೇಕಾಗುವ ಉಪಕರಣಗಳು ಮತ್ತು ಗುಡಿ ಕೈಗಾರಿಕೆಯ ಉಪಕರಣಗಳು ಮುಂತಾದವುಗಳನ್ನು ಉತ್ಪಾದನೆ ಮಾಡಲಾಗುತ್ತಿತ್ತು. [14]

ಸರ್ಕಾರ 1931ರಲ್ಲಿ ಪಿಂಗಾಣಿ ಕಾರ್ಖಾನೆಯನ್ನು ರೂ 13 ಲಕ್ಷ ಬಂಡವಾಳದಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿತು. ಸರ್ಕಾರಿ ಎಲೆಕ್ಟ್ರಿಕ್ ಕೈಗಾರಿಕೆಯನ್ನು 1934ರಲ್ಲಿ 7 ಲಕ್ಷ ರೂ ಬಂಡವಾಳದೊಂದಿಗೆ ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ಇದು ಟ್ರಾನ್ಸ್‌ಫಾರ್ಮರ್‌ಗಳು, ಹಿತ್ತಾಳೆಯ ಅಚ್ಚು, ನೀರಿನ ಮೀಟರ್, ಎಲೆಕ್ಟ್ರಿಕ್ ಫಿಟ್ಟಿಂಗ್, ಬ್ಯಾಟರಿ ಕನೆಕ್ಟರ್‌ಗಳಿಗೆ ಹೊದಿಕೆ, ಬೋಲ್ಟ್ ಮತ್ತು ನಟ್‌ಗಳು, ವಿದ್ಯುತ್ ಬೆಳಕಿನ ಡೂಮ್‌ಗಳ ಮುಸುಕು ಲೈಟ್‌ಗಳು, ಬೇಕ್‌ಲೈಟ್, ಆಕ್ಸಿಡೀಕರಿಸಿದ ಪಾತ್ರೆಗಳು ಹಾಗು ವಿವಿಧ ಗೃಹ ಬಳಕೆಯ ವಸ್ತುಗಳನ್ನು ಉತ್ಪಾದಿಸುತ್ತಿತ್ತು. [15]

ಸರ್ಕಾರ ವೈದ್ಯಕೀಯ ಮತ್ತು ವಿವಿಧ ಔಷಧಿಗಳನ್ನು ನಿರ್ವಹಿಸುವ ಮಳಿಗೆಗಳ ಬೇಡಿಕೆಗಳನ್ನು ಪೂರೈಸುವ ಉದ್ದೇಶದಿಂದ 1931ರಲ್ಲಿ ಬೆಂಗಳೂರಿನಲ್ಲಿ ಇದನ್ನು

ಸ್ಥಾಪಿಸಿತು. ಸರ್ಕಾರಿ ಸೋಪ್ ಕೈಗಾರಿಕೆ ಪ್ರಯೋಗಗಳನ್ನು ನಡೆಸುವ ಹಿನ್ನೆಲೆಯಲ್ಲಿ ಇದು ಆರಂಭವಾಯಿತು. ಔಷಧಿಗಳ ಪೂರೈಕೆಯನ್ನು ಹೆಚ್ಚಿಸುವುದರ ಜೊತೆಗೆ ಸರ್ಕಾರಿ ಮಳಿಗೆಗಳ ಖರೀದಿ ಸಮಿತಿ ಮತ್ತು ಖಾಸಗಿಯವರಿಗೆ ಟೆಸ್ಟ್ ಹೌಸ್ ಆಗಿ ಕಾರ್ಯನಿರ್ವಹಿಸಿತು. ಇದು 1933–34ರ ಸಾಲಿನಲ್ಲಿ 66, 510 ಪೌಂಡ್ ಔಷಧಿಗಳನ್ನು ತಯಾರಿಸಿ ರೂ 50, 000 ಔಷಧಿಯನ್ನು ಸರ್ಕಾರಿ ವೈದ್ಯಕೀಯ ಮಳಿಗೆಗಳಿಗೆ ಮತ್ತು ಉಳಿದ ಉತ್ಪನ್ನಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಿತು. [16] ಈ ಕಾರ್ಖಾನೆಯ ಹೊಸ ಉತ್ಪನ್ನವಾದ 'ವಿಟೊಫೆರಿನ್' ದಕ್ಷಿಣ ಭಾರತದ ಮಾರುಕಟ್ಟೆಯಲ್ಲಿ ಜನಪ್ರಿಯವಾಯಿತು. [17] ಈ ರೀತಿ ಬೆಳವಣಿಗೆ ಹೊಂದಿದ ಇದನ್ನು 1945ರಲ್ಲಿ ಸರ್ಕಾರದ ಖಾಸಗಿ ಸಹಭಾಗಿತ್ವದ ಕಂಪನಿಯಾಗಿ ಪರಿವರ್ತಿಸಲಾಯಿತು.

ಮೈಸೂರು ಲ್ಯಾಂಪ್ ಕಂಪನಿ 1936ರಲ್ಲಿ ರೂ 10 ಲಕ್ಷ ಬಂಡವಾಳದೊಂದಿಗೆ ಆರಂಭವಾಗಿ 1937ರಲ್ಲಿ ಉತ್ಪಾದನೆ ಪ್ರಾರಂಭಿಸಿತು. ಇದರಲ್ಲಿ 17. 6 ರಷ್ಟು ಸರ್ಕಾರ ಬಂಡವಾಳ ಹೂಡಿತ್ತು. [18] ಸಂಸ್ಥಾನದಲ್ಲಿನ ವಿದ್ಯುತ್ ಉತ್ಪಾದನೆ ಮತ್ತು ಅದರ ಬೇಡಿಕೆಗೆ ತಕ್ಕಂತೆ ಇಲ್ಲಿ ಉತ್ಪಾದನೆ ಮಾಡಲಾಗುತ್ತಿತ್ತು. ವಿದ್ಯುತ್ ದೀಪಗಳು, ನಿಯಾನ್ ಸೈನ್‌ಗಳು ಹಾಗು ಅವುಗಳ ಬಿಡಿ ಭಾಗಗಳು ಮತ್ತು ಸಾಮಾನ್ಯ ದೀಪಗಳನ್ನು ಉತ್ಪಾದಿಸುವ ಗುರಿಯನ್ನು ಈ ಕಾರ್ಖಾನೆ ಹೊಂದಿತ್ತು. ಆಧುನಿಕ ಪಟ್ಟಣಗಳ ನೈರ್ಮಲ್ಯ ಮತ್ತು ಆರೋಗ್ಯಕ್ಕಾಗಿ ಒಳಚರಂಡಿ ವ್ಯವಸ್ಥೆಯ ಅಗತ್ಯವನ್ನು ಪೂರೈಸುತ್ತಿತ್ತು. ಸರ್ಕಾರ 1937ರಲ್ಲಿ ಬೆಂಗಳೂರಿನ ಚಿಕ್ಕಬಾಣಾವರದಲ್ಲಿ ರೂ 6 ಲಕ್ಷ ಬಂಡವಾಳದೊಂದಿಗೆ ಒಂದು ಜಂಟಿ ಸ್ಟಾಕ್ ಕಂಪನಿಯನ್ನು ಸ್ಥಾಪಿಸಿತು. [19] ಒಳಚರಂಡಿ ವ್ಯವಸ್ಥೆಗೆ ಅಗತ್ಯವಾಗಿ ಬೇಕಾಗಿದ್ದ ಕೊಳವೆಗಳು, ಕಾರ್ಖಾನೆಗಳಿಗೆ ಬೇಕಾದ ಮೂಸೆಗಳು ಮತ್ತು ಇನ್ನಿತರ ವಸ್ತುಗಳನ್ನು ಇಲ್ಲಿ ಉತ್ಪಾದಿಸಲಾಗುತ್ತಿತ್ತು.

ಹಿಂದೂಸ್ಥಾನ್ ಏರೋನಾಟಿಕ್ಸ್ (ಎಚ್‌ಎಎಲ್)ನ್ನು ಬೆಂಗಳೂರಿನಲ್ಲಿ ಬಾಂಬೆ ಮೂಲದ ವಾಲ್‌ಚಂದ್ ಮತ್ತು ಹೀರಾ ಚಂದ್ 1940ರಲ್ಲಿ ಸ್ಥಾಪಿಸಿದರು. ಕಾರುಗಳ ತಯಾರಿಕೆ ಈ ಕಾರ್ಖಾನೆಯ ಮುಖ್ಯ ಉದ್ದೇಶವಾಗಿತ್ತು. ಅನೇಕ ಕಾರಣಗಳಿಂದಾಗಿ ಕಾರು ತಯಾರಿಕೆಯ ಬದಲು ಇದನ್ನು ವಿಮಾನಗಳ ಜೋಡಣಾ ಘಟಕವನ್ನಾಗಿ ಪರಿವರ್ತಿಸಲಾಯಿತು. ಮೊದಲು ವಿಮಾನದ ಬಿಡಿ ಭಾಗಗಳನ್ನು ಆಮದು ಮಾಡಿಕೊಂಡು ಜೋಡಿಸಲಾಗಿದ್ದು ನಂತರ ಫೈಟರ್ ಜೆಟ್ ವಿಮಾನ ತಯಾರಿಸಲಾಯಿತು. [20] ಇಲ್ಲಿ ಡೋಗ್ಲಾಸ್ ಮತ್ತು ಡಿ. ಸಿ. ಹ್ಯಾವಿಲ್ಯಾಂಡ್ ವಿಮಾನಗಳನ್ನು ಅಧಿಕೃತವಾಗಿ ಸರ್ವಿಸ್ ಮಾಡಲಾಗುತ್ತಿತ್ತು. ಈ ಕೈಗಾರಿಕೆ ಸ್ಥಾಪಿತವಾದ ವೇಳೆಯಲ್ಲಿ 2ನೇ ಮಹಾಯುದ್ಧ ಆರಂಭವಾದರಿಂದ ಹಲವಾರು ಯುದ್ಧ ವಿಮಾನಗಳ ದುರಸ್ತಿ ಕಾರ್ಯವನ್ನು ಇಲ್ಲಿ ಕೈಗೆತ್ತಿಕೊಳ್ಳಲಾಯಿತು.

ಬೆಂಗಳೂರು ವಸಾಹತುಕಾಲದಲ್ಲಿ ಆಡಳಿತ ಕೇಂದ್ರವಾಗಿ ಬೆಳೆದಂತಲ್ಲದೆ ರಸ್ತೆ ಮತ್ತು ಸಾರಿಗೆ ವ್ಯವಸ್ಥೆ ಹೆಚ್ಚಾಯಿತು. ಇದರಿಂದ ಬ್ಯಾಂಕಿಂಗ್ ಕ್ಷೇತ್ರವು ಸಹ ಅಭಿವೃದ್ಧಿಯನ್ನು ಕಂಡಿತು. ಇದರಿಂದ ಮೊದಲು ಖಾಸಗಿ ಲೇವಿದಾರರು ಹಣಕಾಸಿನ ವ್ಯವಹಾರವನ್ನು ಆರಂಭಿಸಿದರು. [21] ಖಾಸಗಿ ಲೇವಿದಾರರ ಶೋಷಣೆಯನ್ನು ತಡೆಗಟ್ಟಲು 1868ರಲ್ಲಿ ಬೆಂಗಳೂರು ಬ್ಯಾಂಕ್ ಲಿ. ಮತ್ತು ಮೈಸೂರು ಬ್ಯಾಂಕ್ ಕಾರ್ಪೋರೇಷನ್ ಆರಂಭವಾಯಿತು. ಇದು ಬೆಂಗಳೂರಿನ ಹಳೆಯ ಬ್ಯಾಂಕ್. ತರುವಾಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ದೇವಾಂಗ ಬ್ಯಾಂಕ್, ಮೈಸೂರು ಇಂಡಸ್ಟ್ರಿಯಲ್ ಬ್ಯಾಂಕ್, ವೈಶ್ಯ ಬ್ಯಾಂಕ್ ಮೊದಲಾದವು ಬೆಂಗಳೂರಿನ ಮುಖ್ಯ ಬ್ಯಾಂಕುಗಳಾಗಿದ್ದವು. ಅದೇ ರೀತಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇಂಪೀರಿಯಲ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಶಾಖೆಗಳು ಬೆಂಗಳೂರಿನಲ್ಲಿ ಸ್ಥಾಪನೆಯಾದವು. ಬೆಂಗಳೂರು

ಸೆಂಟ್ರಲ್ ಕೋ ಆಫರೇಟಿವ್ ಬ್ಯಾಂಕ್ ನಗರದ ಹಳೆಯ ಸಹಕಾರಿ ಬ್ಯಾಂಕ್, ಭಾವಸಾರ ಕ್ಷತ್ರಿಯ ಸಹಕಾರ ಸಂಘ ಬ್ಯಾಂಕ್, ಮಲ್ಲೇಶ್ವರ ಸಹಕಾರ ಬ್ಯಾಂಕ್, ಧಾನ್ಯ ವರ್ತಕರ ಸಹಕಾರಿ ಬ್ಯಾಂಕ್, ಬೆಂಗಳೂರು ಜಿಲ್ಲಾ ಸಹಕಾರಿ ಬ್ಯಾಂಕುಗಳು ಮುಖ್ಯವಾಗಿದ್ದವು.

ಬೆಂಗಳೂರು ಅಭಿವೃದ್ಧಿಗೊಂಡಂತೆ ನಗರ ನೈರ್ಮಲ್ಯ ಮತ್ತು ಸ್ವಚ್ಛತೆಯ ದೃಷ್ಟಿಯಿಂದ ಆರೋಗ್ಯದ ಅವಶ್ಯಕತೆ ಅನಿವಾರ್ಯವಾಯಿತು. ಇದರಿಂದ ಅನೇಕ ಆಸ್ಪತ್ರೆಗಳು ನಿರ್ಮಾಣಗೊಂಡವು. 1848ರಲ್ಲಿ ಮಾನಸಿಕ ಆಸ್ಪತ್ರೆ, ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಬೌರಿಂಗ್ ಆಸ್ಪತ್ರೆಯನ್ನು 1866ರಲ್ಲಿ ನಿರ್ಮಿಸಲಾಯಿತು. ಇದು ಪ್ಯಾರಿಸ್ಸಿನ ಲಾರಿಬೋಸಿಯರ್ ಕಟ್ಟಡದ ವಿನ್ಯಾಸದ ಆಧಾರದ ಕಟ್ಟಡ. ಇಂದಿನ ನೃಪತುಂಗ ರಸ್ತೆಯಲ್ಲಿರುವ ಹೆರಿಗೆ ಆಸ್ಪತ್ರೆಯನ್ನು 1880ರಲ್ಲಿ ಸ್ಥಾಪಿಸಲಾಯಿತು. ಇದು ಬೆಂಗಳೂರಿನ ಮೊದಲ ಹೆರಿಗೆ ಆಸ್ಪತ್ರೆ. ಸೇಂಟ್ ಮಾರ್ಥಾಸ್ ಆಸ್ಪತ್ರೆಯು 1854ರಲ್ಲಿ ಆರಂಭಗೊಂಡಿತು. ಅದೇ ರೀತಿ 1893ರಲ್ಲಿ ವಿಕ್ಟೋರಿಯಾ ಆಸ್ಪತ್ರೆ, 1896ರಲ್ಲಿ ಮಿಂಟೋ ಆಸ್ಪತ್ರೆ, 1935ರಲ್ಲಿ ವಾಣಿವಿಲಾಸ ಆಸ್ಪತ್ರೆ, 1926–27ರಲ್ಲಿ ಕ್ಷಯರೋಗ, ಕುಷ್ಠರೋಗ ಆಸ್ಪತ್ರೆಗಳು, ಜಯಚಾಮರಾಜೇಂದ್ರ ಆಯುರ್ವೇದ ಆಸ್ಪತ್ರೆ 1924ರಲ್ಲಿ ಬೆಂಗಳೂರಿನಲ್ಲಿ ಆರಂಭವಾಯಿತು. ಇವುಗಳ ಜೊತೆಗೆ ಇನ್ನೂ ಹಲವು ಆಸ್ಪತ್ರೆಗಳು ನಿರ್ಮಾಣಗೊಂಡು ನಿರಂತರ ಸೇವೆಯನ್ನು ಮಾಡುತ್ತಿದ್ದವು.

ಒಟ್ಟಾರೆ ಬೆಂಗಳೂರು ವಸಾಹತುಶಾಹಿ ಆಳ್ವಿಕೆಯ ಕಾಲದಲ್ಲಿ ಅಭಿವೃದ್ಧಿಯನ್ನು ಪಡೆದುಕೊಂಡಿತು.

**ಕೊನೆ ಟಿಪ್ಪಣಿಗಳು:**


1. The Subsidiary Treaty (Manuscript) 1799 ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು, and Mysore State Papers Selections, Vol 1 to IV, (1922), Bangalore.
2. ಎಫಿಗ್ರಾಫಿ ಆಫ್ ಕರ್ನಾಟಕ 9, ಬೆಂಗಳೂರು, 68, ಮಡಿವಾಳ ಪು. ಸಂ. 15
3. ಡಾ. ಸೂರ್ಯನಾಥ್ ಕಾಮತ್ (ಮು. ಸಂ) ಕರ್ನಾಟಕ ಸ್ಟೇಟ್ ಗ್ಯಾಜಟಿಯರ್, ಬೆಂಗಳೂರು, ಕರ್ನಾಟಕ ಸರ್ಕಾರ, ಬೆಂಗಳೂರು, (1990), ಪು. ಸಂ. 238, 239, 949.
4. ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಆರ್. ಗೋಪಾಲ್ (ಸಂ) ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, (2013), ಪು. 279
5. ಮೇಲಿನದೆ ಪು. 206
6. ಎಸ್. ಚಂದ್ರಶೇಖರ್ ಆಧುನಿಕ ಕರ್ನಾಟಕದ ಆಂದೋಲನಗಳು (2002) ನವಪ್ರಕಾಶನ, ತಿಪಟೂರು, ಪು. 9
7. ರಿಪೋರ್ಟ್ ಆನ್ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, 1941–42 ಗೌರ್‌ನಮೆಂಟ್ ಪ್ರೆಸ್, ಬೆಂಗಳೂರು, 1943, ಪು. 72
8. ಡಿ. ಸಿ. ರಾಜಪ್ಪ, ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು (1995) ಶೋಭಾ ಪ್ರೊಸೆಸ್ ಪ್ರಿಂಟರ್ಸ್, ಪುತ್ತೂರು, ಪು. 14

9. ಹಯವದನರಾವ್ ಸಿ. (1929) ಮೈಸೂರು ಗ್ಯಾಸೆಟಿಯರ್ ಭಾಗ, 3, ಕರ್ನಾಟಕ ಸರ್ಕಾರ, ಪು. 243
10. ರಿಪೋರ್ಟ್ ಆನ್ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು 1931–32, ಗೌರ್ನಮೆಂಟ್ ಪ್ರೆಸ್, ಬೆಂಗಳೂರು, 1932, ಪು. 37
11. ಸೂರ್ಯನಾಥ ಕಾಮತ್ (1985) ಕರ್ನಾಟಕ ಗ್ಯಾಸೆಟಿಯರ್, ಭಾಗ 2, ಪೂರ್ವೋಕ್ತ, ಪು. . 12
12. ಸ್ವಾಮಿ ಜಿ. ಎಲ್. ಮೈಸೂರು ಇಂಡಸ್ಟ್ರೀಸ್ (ಆನ್ ಇಂಡಸ್ಟ್ರಿಯಲ್ ಗೈಡ್ ಬುಕ್ ಆಫ್ ಮೈಸೂರು) ಕಂಪೈಲರ್ಸ್ ಹ್ಯಾಂಡ್ ಬುಕ್ ಮತ್ತು ಮ್ಯಾನೇಜರ್ ಟೂರಿಸ್ಟ್ ಬ್ಯೂರೋ, ಮೈಸೂರು, ಪು. 33
13. ರಿಪೋರ್ಟ್ ಆನ್ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, 1929–30, ಪು. 36
14. ಸ್ವಾಮಿ ಜಿ. ಎಲ್. ಮೈಸೂರು ಇಂಡಸ್ಟ್ರೀಸ್, ಪೂರ್ವೋಕ್ತ, ಪು. 36
15. ಮೇಲಿನದೆ, ಪು. 35
16. ರಿಪೋರ್ಟ್ ಆನ್ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, 1934–35, ಪು. 83
17. ರಿಪೋರ್ಟ್ ಆನ್ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, 1937–38, ಪು. 72
18. ಸೂರ್ಯನಾಥ್ ಕಾಮತ್, ಭಾಗ 2, (1985) ಪೂರ್ವೋಕ್ತ, ಪು. 16
19. ಮೇಲಿನದೆ, ಪು. 16
20. ಮೇಲಿನದೆ, ಪು. 18
21. ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಆರ್. ಗೋಪಾಲ್ (ಸಂ), ಪೂರ್ವೋಕ್ತ, ಪು. 365.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4. 0 International License.